## ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಪ್ರಕರಣ ಸಂಖ್ಯೆಃ 36/2026

| **ದಿನಾಂಕಃ 26.05.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
|---|---|---|---|
| ಸಿಡಬ್ಲ್ಯೂಃ | 6 | ಪಿಡಬ್ಲ್ಯೂ | 3 |
| ಹೆಸರು | ಸಿದ್ದಾರ್ಥ ಜೆ. | | |
| ತಂದೆ / ಗಂಡನ ಹೆಸರು | ಲೇಟ್ ಜಯ್ಯಣ್ಣ | | |
| ವಯಸ್ಸು | 63 | | |
| ಉದ್ಯೋಗ | ನಿವೃತ್ತ ಪಿ.ಎಸ್.ಐ. | | |
| ವಾಸ | ಕೊರಟಗೆರೆ | | |

## ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ನಾನು ದಿಃ24.06.2014 ರಿಂದ ದಿಃ02.12.2019 ರ ವರೆಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ಮಾಡಿರುತ್ತೇನೆ.

2. ದಿಃ14-10-2017 ರಂದು ಸಂಜೆ 4.15 ಗಂಟೆ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ವರದಿ, ಆರೋಪಿ ಮತ್ತು ಮಧ್ಯದ ಮಾಲುಗಳನ್ನು ಜೊತೆಗೆ ಅಮಾನತ್ತು ಪಂಚನಾಮೆ ಪರಿಶೀಲಿಸಿ ಹಾಲಿ ಪ್ರಕರಣದಂತೆ ಪ್ರ.ವ.ವ.ನ್ನು ದಾಖಲು ಮಾಡಿರುತ್ತೇನೆ. ಸದರಿ ಪ್ರ.ವ.ವ.ನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮಧ್ಯದ ವಸ್ತುಗಳಾದ 7 ಐಟಂಗಳನ್ನು ಠಾಣಾ ನಮೂದು ಪಟ್ಟಿಯಲ್ಲಿ ನಮೂದಿಸಿರುತ್ತೇನೆ. ಆರೋಪಿಯನ್ನು ವಿಚಾರಣೆ ಮಾಡಿ ಸ್ವಇಚ್ಛ ಹೇಳಿಕೆ ಪಡೆದಿರುತ್ತೇನೆ. ಆರೋಪಿಯನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಜರುಗಿಸಿ ರಿಮಾಂಡ್ ಅರ್ಜಿ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಚಾಸಾ.2 ರಿಂದ 5 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ.

3.ದಿಃ08-11-2017 ರಂದು ಹಾಲಿ ಪ್ರಕರಣದಲ್ಲಿ ವಶಪಡಿಸಿಕೊಂಡು ಮಧ್ಯದ ವಸ್ತುಗಳನ್ನುFSL ಗೆ ಕಳುಹಿಸಲು ಮನವಿ ಮಾಡಿರುತ್ತೇನೆ. ದಿಃ17-11-2017 ರಂದು ಸಿಬ್ಬಂದಿ FSL

ನ ಸ್ವೀಕೃತಿಯನ್ನು ಕೊಟ್ಟಿರುತ್ತಾರೆ. ದಿಃ23-11-2017 ರಂದು ಹಾಲಿ ಪ್ರಕರಣದಲ್ಲಿ ವಶಪಡಿಸಿಕೊಂಡ ಮಧ್ಯದ ವಸ್ತುಗಳ ಪೈಕಿ FSL ಗೆ ಕಳುಹಿಸಿರುವುದನ್ನು ಬಿಟ್ಟು ಬೇರೆ ವಸ್ತುಗಳನ್ನು ಅಭಕಾರಿ ನಿರೀಕ್ಷಕರು ಶಿರಾ ವಲಯದವರಿಗೆ ವಿಲೇವಾರಿ ಮಾಡಲು ಮನವಿ ಮಾಡಿರುತ್ತೇನೆ. FSL ವರದಿಯನ್ನು ಸಹ ಪಡೆದಿರುತ್ತೇನೆ. ದಿಃ27-11-2017 ರಂದು ಹಾಲಿ ಪ್ರಕರಣದಲ್ಲಿ ತನಿಖೆಯನ್ನು ಪೂರೈಸಿ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

4. ಸಾಕ್ಷಿಯು ನಿ.ಪಿ.2 ರ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ.ಯನ್ನು ಮತ್ತು FSL ವರದಿಯ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಮತ್ತು ನಿಪಿ-4. ಸದರಿ ಸಹಿಗಳನ್ನು ನಿ.ಪಿ.3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 5 ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜಿ.ಎಸ್.ಆರ್. ವಕೀಲರಿಂದಃ**

ಮೊದಲು ದೂರು ಪಡೆದು ನಂತರ ಪಂಚನಾಮೆ ಮಾಡಬೇಕು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಘಟನಾ ಸ್ಥಳದಲ್ಲಿ ಯಾರು ಇರುತ್ತಾರೆಂದು ನೋಡಿಲ್ಲ. ಮಾಲು ಪಟ್ಟಿಯಲ್ಲಿ ರೂ.50, 20, ಮತ್ತು 10 ರೂ. ನ ಹಣದ ಸಂಖ್ಯೆ ಬರೆದಿಲ್ಲ. ಮಾಲು ಪಟ್ಟಿಯಲ್ಲಿ ರಾಜ ವಿಸ್ಕಿ ಮಧ್ಯದ ಪ್ಯಾಕೇಟ್ ಗಳ ಸಂಖ್ಯೆ ಮತ್ತು ಬ್ಯಾಚ್ ಬರೆದಿಲ್ಲ. ನಿಪಿ-1 ರ ಪಂಚನಾಮೆಯಲ್ಲಿ ಸಹ ಚಾಸಾ.1 ರವರು ರಾಜ ವಿಸ್ಕಿ ಮಧ್ಯದ ಪ್ಯಾಕೇಟ್ ಗಳ ಸಂಖ್ಯೆ ಮತ್ತು ಬ್ಯಾಚ್ ಬರೆದಿಲ್ಲ. ನಿಪಿ.1 ರ ಪಂಚನಾಮೆಯಲ್ಲಿರುವ ಅಂಶಗಳು ಗೊತ್ತು. ನಾನು FSL ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಅಕ್ರಮ ಮಧ್ಯ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.2 ರಿಂದ 5 ರವರನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ ಮತ್ತು ಸುಳ್ಳು ಪ್ರಕರಣ ದಾಖಲಿಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.